ಪಿಪ್ಪನ್ನೂ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಜಿ. ದುಗ್ಗಪ್ಪ.—ಹಾಗಾದರೆ ಈರೀತಿ allot ಮಾಡಿರುವ ಪೊಬಲಗು ಬಹಳ ಕಡಮೆಯಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ಜಿ. ದುಗ್ಗಪ್ಪ.—ಈ ದೃಷ್ಟಿಯಿಂದ ಈ ವರ್ಷ ಈ ಪೊಬಲಗನ್ನು ಹೆಚ್ಚುಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗಾಗಲೇ ಬಜೆಟ್ proposal ಗಳನ್ನು ತಮ್ಮ ಮುಂದಿಟ್ಟಿದ್ದೇವೆ.

Tanks (Restoration in Magadi Taluk).

Q.—644. Sri S. SIDDAPPA (Magadi).—

Will the Government be pleased to state:—

Whether the tanks of Mayasandra, Biskur, Koramangala, Uddandahalli Ayyanakere, Kalarikere and Kempasagara in Magadi Taluk will be restored?

A.—Sri Kadidal MANJAPPA (Minister for Revenue and Public Works).—

(1) Mayasandra Tank—No necessity for restoration at present.

(2) Biskur Tank—The estimate is recently sanctioned and the work is being taken up.

(3) Koramangala—Proposals are under consideration.

(4) Uddandahalli Ayyanakere—Proposals are under consideration.

(5) Kalarikere—No proposal so far.

(6) Kempasagara—No necessity for restoration at present.

ಶ್ರೀ ಎಸ್. ಸಿದ್ದಪ್ಪ.—ನಾನು ಕೇಳಿರತಕ್ಕ ಕೆರೆಗಳ ಪೈಕಿ ಮಾಯನಂದ್ರ ಮತ್ತು ಕೆಂಪಸಾಗರ ಕೆರೆಗಳಿಗೆ ಈಗ ಜೀರ್ಣೋದ್ಧಾರ ಮಾಡುವ ಅವಶ್ಯಕತೆಯಿಲ್ಲವೆಂದು ಹೇಳಿದ್ದೀರಿ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾದ ಸ್ಥಿತಿಯಲ್ಲವೆ. ಜೀರ್ಣೋದ್ಧಾರ ಮಾಡಬೇಕಾಗಿಲ್ಲವೆಂದು ತಜ್ಞರ ಅಭಿಪ್ರಾಯ.

ಶ್ರೀ ಎಸ್. ಸಿದ್ದಪ್ಪ.—ಈ ಪ್ರಶ್ನೆಗೆ ಇಲಾಖೆಯವರು ಜವಾಬು ಕಳುಹಿಸುವಾಗ ಸರಿಯಾಗಿ ಯೋಚನೆ ಮಾಡಿ ಕಳುಹಿಸಿದ್ದಾರೆಯೇ ಅಥವಾ ಹಾಗೆಯೇ ಕಳುಹಿಸಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡಿಯೇ ಕಳುಹಿಸಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಪರಿಶೀಲನೆಮಾಡಿ ಕಳುಹಿಸಿದ್ದರೆ ಹೀಗೆ ಹೇಳುವುದಿಲ್ಲ. ಕೆಂಪ ಸಾಗರದ ಕೆರೆಯ ಅಚ್ಚುಕಟ್ಟು 1,000 ಎಕರೆಗಳಿವೆ. ಹಾಗೆಯೇ ಮಾಯಸಂದ್ರದ್ದೂ.

ಶ್ರೀ ಕಡಿದಾಳ್ ಮಂಜಪ್ಪ.—ಮಾಯನಂದ್ರ ಕೆರೆಗೆ ಇತ್ತೀಚೆಗೆ 30,000 ರೂಪಾಯಿಗಳನ್ನು ಖರ್ಚುಮಾಡಿ ರಿಪೇರಿ ಮಾಡಿಸಿದ್ದಾರೆ. ಆದ್ದರಿಂದ ನಮ್ಯಕ್ಕೆ ಮತ್ತೆ ರಿಪೇರಿ ಅಗತ್ಯವಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ತಾವು ಅಲ್ಲಿ ಮಿಾಟಿಂಗ್ ಮಾಡಿದಾಗ ಅನೇಕರು ಇದನ್ನು ಜೀರ್ಣೋದ್ಧಾರ ಮಾಡಬೇಕೆಂದು ಕೇಳಿದ್ದಕ್ಕೆ, ಇದಕ್ಕೆ ರಿಪೇರಿ ಮಾಡುವುದು ಅಗತ್ಯವೆಂದು ಹೇಳಿದ್ದು ನೆನಪಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ನೆನಪಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಆದರೂ, ಚಿಂತೆಯಿಲ್ಲ. ಈಗ ಇಷ್ಟು ಹೇಳಿದಮೇಲಾದರೂ ಈ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಮತ್ತು ಅಗತ್ಯವಾದ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆಯೇ ಆಗಲಿ, ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಇನ್ನು ಬಾಕಿ ಕೆರೆಗಳಾದ ಕೋರಮಂಗಲದ ಕೆರೆ, ಬಿನ್ನೂರು ಕೆರೆ ಮಂಜೂರಾಗಿ ಒಂದು ವರ್ಷವಾದರೂ ಇನ್ನೂ ಕಾಮಗಾರಿಗಳನ್ನು ಕೈಗೊಳ್ಳದಿರುವುದಕ್ಕೆ ಕಾರಣವೇನು!

ಶ್ರೀ ಕಡಿದಾಳ್ ಮಂಜಪ್ಪ.—ಬಿನ್ನೂರ್ ಕೆರೆಯ ವಿಚಾರದಲ್ಲಿ ಎಸ್ಟಿಮೇಟು ಸ್ಯಾಂಕ್ಷನ್ ಆಗಿದೆ. ಇನ್ನು ಕೆಲಸ ತೆಗೆದುಕೊಳ್ಳುತ್ತಾರೆ. ಕೋರಮಂಗಲ ಕೆರೆ, ಉದ್ದಂಡಹಳ್ಳಿ ಅಯ್ಯನಕೆರೆ ಪ್ರಾಜೆಕ್ಟ್‌ಗಳು ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆಯಲ್ಲವೆ.

ಶ್ರೀ ಎಸ್. ಸಿದ್ದಪ್ಪ.—ಕೋರಮಂಗಲದ ಕೆರೆ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಕಾಗದ ಪತ್ರಗಳು ಎಗ್ಸಿಕ್ಯೂಟಿವ್ ಇಂಜನಿಯರ ಆಫೀಸಿನಿಂದ ಸೂಪರಿಂಟೆಂಡಿಂಗ್ ಇಂಜನಿಯರ ಆಫೀಸಿಗೆ ಹೋಗಿ ಒಂದು ವರ್ಷವಾಯಿತು! ಇನ್ನೂ ಅಲ್ಲಿಂದ ಬಂದಿಲ್ಲ. ಇದರಿಂದಾಗಿ ರೈತರಿಗೆ ತುಂಬ ನಷ್ಟವಾಗುತ್ತಿದೆಯೆಂಬುದನ್ನು ಗಮನಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—Irrigation Enquiry ನಡೆಯುತ್ತಿದೆ. ಅದು ಎಸ್ಟಿಮೇಟಾಗಿ ಬಂದ ತರುವಾಯ ಜಾಗ್ರತೆಯಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ತಾವು ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಹೆಚ್ಚಿನ ಉತ್ಸಾಹಶಾಲಿಗಳಾಗಿದ್ದೀರಿ. ಆದ್ದರಿಂದ ಇದನ್ನು ಬೇಗಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

(ಉತ್ತರವಿಲ್ಲ)